ದಿಃ 13-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಫಿರ್ಯಾದಿದರ ಪರ ಶ್ರೀ. **MSD** ವಕೀಲರಿಂದ:

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು , ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯದಿಂದ ಕೂಡಿದ್ದು ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಫಿರ್ಯಾದಿದಾರ ಪರ ವಕೀಲರು ಮೆಮೋ ಸಲ್ಲಿಸಿದ್ದು ಮೌಖಿಕ ಹೇಳಿಕೆ ಸಮಯದಲ್ಲಿ ಹಾಜರುಪಡಿಸಿದ ದಾಖಲಾತಿಗಳನು ಫಿರ್ಯಾದಿದಾರನ ಪರ ಗುರುತಿಸಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ.

ಆರೋಪಿ ನೀಡಿದ ಮೂರು ಚೆಕ್ಕುಗಳನ್ನು ಹಾಜರುಪಡಿಸಿದು ಅವುಗಳನ್ನು ನಿಪಿ-**1** ರಿಂದ **3,** ಆರೋಪಿ ಸಹಿಯನ್ನು ನಿಪಿ-**1**(ಎ) ರಿಂದ **3**(ಎ) ಎಂದು, ಬ್ಯಾಂಕಿನ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**4** ನೋಟಿಸಿದ ಕಚೇರಿ ಪ್ರತಿಯನ್ನು ಹಾಜರುಪಡಿಸಿದು ಅದನ್ನು ನಿಪಿ-**5** ಎಂದು, ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**5**(ಎ) ಎಂದು, ಪೋಸ್ಟ ಮಾಸ್ಟರ ಇವರಿಗೆ ನೀಡಿದ ದೂರಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**6** ಎಂದು, ಅಂಚೆ ಕಚೇರಿಯ ಉತ್ತರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**7** ಎಂದು ಗುರುತಿಸಲಾಯಿತು.

ಕಲಂ 145(2) ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಆದೇಶದ ಮೇರೆಗೆ

ಪಾಟೀ ಸವಾಲು : ಆರೋಪಿ ಪರ ಶ್ರೀ. **KGP** ವಕೀಲರಿಂದ:

ನಾನು ಆರೋಪಿಗೆ ಕಬ್ಬು ಕಟಾವು ಮಾಡಲು ಹಣ ನೀಡಿರುತ್ತೇನೆ. ಹಣವನ್ನು ಸನಕ ನಗರದಲ್ಲಿ ಆರೋಪಿ ಅಣ್ಣ ತಮ್ಮಂದಿರ ಮುಂದೆ ಕೊಟ್ಟಿರುತ್ತೇನೆ. ಚೆಕ್ಕನ್ನು ಸನಕನ ಹಳ್ಳಿಯಲ್ಲಿ ಕೊಟ್ಟಿರುತ್ತಾನೆ. ನಾನು ಹಣ ಕೊಡುವಾಗ ಆರೋಪಿ ಕಡೆಯಿಂದ ಇಬ್ಬರು ಮತು ನನ್ನ ಕಡೆಯಿಂದ ಇಬ್ಬರು ಜನ ಇದ್ದರು. ಅವರು ಭೀಮು ಪೂಜಾರಿ ಮತ್ತು ಲಾಯಪ್ಪ ಪೂಜಾರಿ

ಮತ್ತು ಬಾನುದಾಸ ರಂಡಾಳೆ ಮತ್ತು ಸಿದ್ದಾರಾಮ ಬಾಬಲೇಶ್ವರ ಎನ್ನುವವರು ಇದ್ದರು. ಆರೋಪಿತರು ನನಗೆ ಚೆಕ್ಕು ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಬ್ಬು ಕಟಾವು ಮಾಡಲು ಅರೋಪಿಗೆ ಹಣ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಲಿಖಿತ ಕರಾರು ಪತ್ರ ಇಲ್ಲ ಸಾಕ್ಷಿ ಮುಂದುವರೆದು ಆರೋಪಿ ಈ ಮೊದಲು ನಮ್ಮ ಮುಂದೆ ಕಬ್ಬು ಕಟಾವು ಮಾಡುತ್ತಿದ್ದ. ಒಂದು ವ್ಯವಹಾರ ಆಗಬೇಕಾದರೆ ಕರಾರು ಪತ್ರ ಆಗಬೆಕು ಎಂದರೆ ಸರಿ, ಆದರೆ ನಾನು ವಿಶ್ವಾಸದ ಮೇಲೆ ನೀಡಿರುತ್ತೇನೆ. ನಾನು ಆರೋಪಿ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಸಾಕ್ಷ ನುಡಿಯಲು ತಯಾರಿರುತ್ತಾರೆ. ಸಾಕ್ಷಿಗೆ ಚೆಕ್ಕುಗಳ ಮೇಲೆ ದಿನಾಂಕ ಮತ್ತು ಅದರಲ್ಲಿರುವ ಅಕ್ಷರಗಳನ್ನು ಸಂತು ಎನ್ನುವ ಸರ್ ಬರೆದಿರುತ್ತಾರೆ. ನಿಪಿ-1 ರಿಂದ 3 ರ ಮೇಲೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ.

ಸಾಕ್ಷಿಗೆ ಆರೋಪಿತನ ವಕಾಲತ ಪ್ರತಿ ತೋರಿಸಿ ಸಾಕ್ಷಿ ಈ ರೀತಿ ಸಹಿ ಮಾಡುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚೆಕ್ಕಿನ ಮೇಲೆ ನಾನು ಕೊಟ್ಟೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-**1** ರಿಂದ **3** ರ ಮೇಲೆ ಆರೋಪಿ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಬರೆದ ಸಂಗತಿಗಳ ಕುರಿತು ನನಗೆ ಅಷ್ಟು ತಿಳುವಳಿಕೆ ಇಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಬರೆದ ಸಂಗತಿಗಳ ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ